

ಕಾಂಪೌಂಡ್ ಮೇಲೆ ಅಲೆದಾಡುವ ನವಿಲುಗಳು, ಅಂಗಳಕ್ಕೆ ಹಣಕಿ ಹಾಕುವ ಅಳಿಲು ಮುಂಗುಸಿಗಳು, ಅಡುಗೆ ಮನೆ ಕಿಟಕಿ ಗಾಜಿಗೆ ಬಡಿ ಬಡಿದು ತಮಾಷೆ ನೋಡುವ ಮರಕುಟಿಕ, ಬೆಡ್ ರೂಮಿನ ಅಂಚಿಗೆ ಮುತ್ತಿಡುವ ಬಾಳೆಗಿಡಗಳು, ಹಾಲು ಬೆಳದಿಂಗಳು ಸುರಿದು ಹುಚ್ಚು ಹಿಡಿಸುವ ತಾರಸಿ ಮೇಲಿನ ಅದ್ಭುತಲೋಕ, ಚಿತ್ರ ಬಿಡಿಸಿಟ್ಟಂತೆ ಕಾಣುವ ಗಿಡಮರಗಳು! ನಿಸರ್ಗವನ್ನು ಧ್ಯಾನಿಸುವ ಅಚ್ಚುಕಟ್ಟಾದ ಮನೆ! ಇದು ಭ್ರಮೆಯ ಮಾತಲ್ಲ. ನಾವಿದ್ದ ಅನೇಕ ಬಾಡಿಗೆಮನೆಗಳು ಹೀಗೆ ಇದ್ದವು ಅಥವಾ ಇಂತಹ ಮನೆಗಳನ್ನೇ ಹುಡುಕಿಹೋಗುತ್ತಿದ್ದೆವು. ಅದೇನು ಕಾಕತಾಳೀಯವೋ ಆಕಸ್ಮಿಕವೋ ಬಹುತೇಕ ಇಂತಹ ಮನೆಗಳೇ ಸಿಕ್ಕಿಬಿಟ್ಟವು. ಪ್ರಕೃತಿಯ ನಡುವೆ ದಟ್ಟ ಕಾಡಿನ ತೋಳುಗಳಲ್ಲಿ ಇರುವವೆಂಬ ಭಾವ ಹುಟ್ಟಿಸಿ ಕವಿತೆಗಳನ್ನು ಬರೆಸಿದ ಮನೆಗಳು! ಸ್ವಂತ ಮನೆಗಿಂತಲೂ ಹೆಚ್ಚು ನೆಮ್ಮದಿ ಕೊಟ್ಟ ಈ ಮನೆಗಳೆಲ್ಲ ಉಸಿರಾಟದ ಗತಿಯನ್ನು ನಿರ್ದೇಶಿಸುತ್ತ ಬದುಕು–ಬರಹ, ಚಿಂತನೆಗಳನ್ನು ರೂಪಿಸಿದವು ಎಂದರೂ ಹೆಚ್ಚುಗಾರಿಕೆಯಲ್ಲ.

ಹಲವು ಸಲ ನಮ್ಮಂತೆ ಕೈಗಳೇ ಇಲ್ಲದ ಹಕ್ಕಿಗಳ ಕುರಿತು ಯೋಚಿಸುತ್ತೇನೆ. ಜೀವಮಾನದಲ್ಲಿ ಎಷ್ಟು ಮನೆ ಕಟ್ಟುತ್ತವೆ ಅವು! ಬರೀ ಕೊಕ್ಕನ್ನೇ, ತನ್ನ ದೈಹಿಕ ಶಕ್ತಿಯನ್ನೇ ನೆಚ್ಚಿ ಪುಟ್ಟ ಗೂಡು ಕಟ್ಟಿ ಮೊಟ್ಟೆ ಮರಿಗಳನ್ನು ಸಲಹುತ್ತದೆ. ಹೆಚ್ಚಿನ ಹಕ್ಕಿ ಪ್ರಭೇದಗಳಲ್ಲಿ ಗಂಡುಹಕ್ಕಿ ಪ್ರತಿಯೊಂದು ಹೊಸ ಕೂಡುವಿಕೆಗೂ ಮುನ್ನ ಹೊಸತೊಂದು ಮನೆಯನ್ನೇ ಕಟ್ಟಿಬಿಡುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದರೆ ತನ್ನ ಮನೆ ಶತಮಾನಗಳ ಕಾಲ ಬಾಳಬೇಕೆಂದು ಕನಸುವುದು ಮಾನವ ಸಹಜವಲ್ಲದ ನಡವಳಿಕೆ ಇರಬೇಕು. ಹಾಗಾಗಿಯೇ ನಮ್ಮಂತಹ ನಾವೆಲ್ಲ ಮುಕ್ಕಾಲು ಜೀವನ ಮುಗಿದರೂ ಮನೆ ಕಟ್ಟಲಾಗದೆ ಕೋಗಿಲೆಗಳಂತೆ ಹಾರಾಡಿಕೊಂಡಿರುವುದು!

ಅಲ್ಲಲ್ಲಿ ಕೈಕಾಲಿಗೆ ತಾಕುವಂತೆ ಹರಡಿಕೊಂಡ ಪುಸ್ತಕಗಳು, ಮ್ಯಾಗಜಿನ್‌ಗಳು, ಕುರ್ಚಿ, ಮೇಜುಗಳು, ಸೋಫಾದ ಮೇಲೆ ಬಿದ್ದುಕೊಂಡ ಬೆಕ್ಕುಗಳು, ಗಾಳಿಗೆ ಹರವಿದ ಮಗುವಿನ ಬಟ್ಟೆ, ಸುಕ್ಕಾದ ಬ್ರೆಡ್ ಸ್ಪ್ರೆಡ್, ಅಲ್ಲೆಲ್ಲೋ ಒಂದು ಕಿರಿಕಿರಿ ಕೊಡುವ ನಲ್ಲಿ ಅಥವಾ ಬಾಗಿಲ ಚಿಲಕ, ಅಡುಗೆಮನೆ